ಈ) ದಿನಾಂಕ ೧-೭-೧೯೯೦ರಿಂದ ಜಾರಿಗೆ ಬಂದ ಮೋಟಾರು ವಾಹನ ಕಾಯಿದೆ ೧೯೮೮ರ ಪ್ರಕಾರ ಯಾವುದೇ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಅಥವಾ ರಾಜ್ಯ ಸಾರಿಗೆ ಪ್ರಾಧಿಕಾರವು ರಾಷ್ಟ್ರೀಕರಣಗೊಳ್ಳದ ಬಸ್ಸು ಮಾರ್ಗಗಳಲ್ಲಿ ಪರವಾನಿಗೆಗಳನ್ನು ನೀಡಲು ಯಾವುದೇ ನಿರ್ಬಂಧ ಇರುವುದಿಲ್ಲ ಈ ಅನುವಿನ ದೇರೆಗೆ ಯಾವುದೇ ಆದೇಶವನ್ನು ಹೊರಡಿಸುವ ಅಗತ್ಯವಿರುವುದಿಲ್ಲ.

ತಾರಕ ಯೋಜನೆಯ ನಾಲಾ ಕೆಲಸಗಳಿಗೆ 1990-91ನೇ ಸಾಲಿಗೆ ಹಣವನ್ನು ಬಿಡುಗಡೆ ಮಾಡುವ ಬಗ್ಗೆ

೧೦೪೬.—ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ತಾರಕ ಯೋಜನೆಯ ನಾಲಾ ಕೆಲಸಗಳಿಗೆ ೧೯೯೦-೯೧ನೇ ಸಾಲಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ?

ಆ) ತಾರಕ ಯೋಜನೆಯ ನಾಲಾ ನಿರ್ವಹಣಾ ಕೆಲಸಗಳಿಗೆ ೧೯೯೦-೯೧ನೇ ಸಾಲಿಗೆ ಎಷ್ಟು ಹಣ ಮುಂಗಡ ಪತ್ರದಲ್ಲಿ ಕಾಧಿರಿಸಲಾಗಿದೆ ?

ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೯೯೦-೯೧ನೇ ಸಾಲಿನ ಬಜೆಟ್‌ನಲ್ಲಿ ಈ ಯೋಜನೆಗೆ ಯಾವ ಅನುದಾನವು ಇಲ್ಲ.

ಆ) ಉದ್ಭವಿಸುವುದಿಲ್ಲ.

4ನೇ ರಾಷ್ಟ್ರೀಯ ಹೆದ್ದಾರಿಯನ್ನು 4 ದಾರಿ ಹೆದ್ದಾರಿಯನ್ನಾಗಿ ಪರಿವರ್ತನೆ

೧೦೪೭. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೆಂಗಳೂರಿನಿಂದ ಕೋಲಾರ ರಾಷ್ಟ್ರೀಯ ಹೆದ್ದಾರಿ-೪ರಲ್ಲಿ ಇತ್ತೀಚೆಗೆ ವಾಹನಗಳ ಓಡಾಟ ಜಾಸ್ತಿಯಾಗಿ ಆಪಘಾತಗಳಿಂದ ಹೆಚ್ಚು ಸಾವು ನೋವುಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬೆಂಗಳೂರಿನಿಂದ ಮುಳಬಾಗಿಲಿನವರೆಗೂ ರಾಷ್ಟ್ರೀಯ ಹೆದ್ದಾರಿ-೪ನ್ನು ೪ ದಾರಿಗಳ ರಸ್ತೆಯನ್ನಾಗಿ ಪರಿವರ್ತಿತ ಮಾಡಿಬೇಕೆಂದು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರನ್ನು ವಿನಂತಿ ಮಾಡಿದ್ದರೆ ಕೂಡಲೇ ೪ ದಾರಿಗಳ ಹೆದ್ದಾರಿಯನ್ನಾಗಿ ಪರಿವರ್ತನೆ ಮಾಡಲೇ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಲಾಗುವುದೇ ?

ಇ) ಮೇಲ್ಕಂಡ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ವೇಗದ ಓಡಾಟಕ್ಕೆ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು.)

ಅ) ಬಂದಿದೆ.

ಆ) ಬೆಂಗಳೂರಿನಿಂದ ಮದ್ರಾಸ್ ವರೆಗೆ ರಸ್ತೆಯನ್ನು "ಎಕ್ಸ್‌ಪ್ರೆಸ್ ಹೈವೇ"ಯಾಗಿ ಮುಂದಿನ ೧೦ ವರ್ಷಗಳ ಒಳಗೆ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರದವರು ಯೋಜನೆ ಹಾಕಿಕೊಂಡಿದಾರೆ. ಸದ್ಯಕ್ಕೆ ಬೆಂಗಳೂರಿನಿಂದ ಹೊಸಕೋಟೆಯವರೆಗೆ ೪ ಪಥ ರಸ್ತೆಯನ್ನು ಮಾಡಲು ಇನ್ನೇ ಯೋಜನೆಯಲ್ಲಿ ಕೇಂದ್ರ ಸರ್ಕಾರದವರು ಸೇರಿಸಿದ್ದಾರೆ.

ಇ) ಬೆಂಗಳೂರಿನಿಂದ ರಾಜ್ಯದ ಗಡಿಯವರೆಗೆ ರಸ್ತೆಯನ್ನು ಹಂತ ಹಂತವಾಗಿ ಸಂಪೂರ್ಣವಾಗಿ ಬಲಪಡಿಸಲಾಗಿದೆ ಮತ್ತು ಕೋಲಾರಕ್ಕೆ ಒಂದ ಬೈಪಾಸ್ ನಿರ್ಮಿಸಲಾಗಿದೆ. ನರಸಾಪುರಕ್ಕೆ ಬೈಪಾಸ್ ರಸ್ತೆ ಕೆಲಸ ನಡೆಯುತ್ತಿದೆ. ಮುಳಬಾಗಿಲಿಗೆ ಬೈಪಾಸ್ ಕೆಲಸಕ್ಕೆ ಒಪ್ಪಿಗೆ ದೊರತಿದೆ. ರಸ್ತೆಯು ವಾಹನ ಸಂಚಾರ ಸುಗಮವಾಗುವಂತೆ ಸೂಕ್ತ ಮಾರ್ಗಸೂಚಿ ಮತ್ತು ಸೂಚನಾಫಲಕಗಳನ್ನು ಹಾಕಲಾಗಿದೆ.